## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯಃ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡದಲ್ಲಿರುವ ಬ್ಯಾಂಕ್ವೆಟ್ ಹಾಲ್ ಹಾಗೂ ಸಮ್ಮೇಳನ ಸಭಾಂಗಣಗಳಿಗೆ ನಿಗಧಿಪಡಿಸಿರುವ ಶುಲ್ಕವನ್ನು ತೆರಿಗೆಯೇತರ ಆದಾಯದಡಿಯಲ್ಲಿ ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:-
1. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 112 ಡಿಬಿಎಂ 1995, ದಿನಾಂಕ:10.05.1996.
2. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಯವರು, ಆರ್ಥಿಕ ಇಲಾಖೆ, ಅವರ ಅರೆ ಸರ್ಕಾರಿ ಪತ್ರ ಸಂಖ್ಯೆ:ಆಇ 30 ಉಕಾ (ಆ&ಸಂ)2017, ದಿನಾಂಕ:11.08.2018.

********

**ಪ್ರಸ್ತಾವನೆ:**

ವಿಧಾನಸೌಧ ಮತ್ತು ಬಹುಮಹಡಿ ಕಟ್ಟಡದಲ್ಲಿರುವ ಬ್ಯಾಂಕ್ವೆಟ್ ಹಾಲ್, ಸಮ್ಮೇಳನ ಸಭಾಂಗಣ ಮತ್ತು ಸಮಿತಿ ಕೊಠಡಿಗಳಿಗೆ ರಾಜ್ಯ ಸರ್ಕಾರದ ಇಲಾಖೆಗಳು, ಕರ್ನಾಟಕ ಲೋಕ ಸೇವಾ ಆಯೋಗ ಮತ್ತು ಕೇಂದ್ರ ಲೋಕ ಸೇವಾ ಆಯೋಗ ಇವುಗಳನ್ನು ಹೊರತು ಪಡಿಸಿ ದಿನವೊಂದಕ್ಕೆ ಕ್ರಮವಾಗಿ ರೂ. 15,000-00, ರೂ. 6,000-00 ಮತ್ತು ರೂ.2,000-00ಗಳ ಶುಲ್ಕ ವಿಧಿಸಲಾಗಿದ್ದು, ಬಹುಮಹಡಿ ಕಟ್ಟಡದಲ್ಲಿನ ಸಮ್ಮೇಳನ ಸಭಾಂಗಣ ಮತ್ತು ಸಮಿತಿ ಕೊಠಡಿಗಳಿಗೆ ದಿನವೊಂದಕ್ಕೆ ಕ್ರಮವಾಗಿ ರೂ.2,000-00 ಮತ್ತು ಸಮಿತಿ ಕೊಠಡಿ ಒಂದಕ್ಕೆ ತಲಾ ರೂ. 1,000-00 ಶುಲ್ಕ ನಿಗಧಿಪಡಿಸಿ ಮೇಲೆ ಓದಲಾದ ಕ್ರಮಾಂಕ (1)ರಲ್ಲಿ ಆದೇಶ ಹೊರಡಿಸಲಾಗಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ವಿಧಾನಸೌಧ ಬ್ಯಾಂಕ್ವೆಟ್ ಹಾಲ್, ಸಮ್ಮೇಳನ ಸಭಾಂಗಣ, ಸಮಿತಿ ಕೊಠಡಿಗಳೇ ಅಲ್ಲದೆ ವಿಕಾಸಸೌಧ, ಬಹುಮಹಡಿ ಕಟ್ಟಡದಲ್ಲಿರುವ ಸಮ್ಮೇಳನ ಸಭಾಂಗಣ, ಸಮಿತಿ ಕೊಠಡಿಗಳಲ್ಲಿ ಸಭೆ ಸಮ್ಮೇಳನ ಸಮಾರಂಭ ಇತ್ಯಾದಿಗಳಿಗೆ ಬರುತ್ತಿರುವ ಬೇಡಿಕೆಗಳು ಹೆಚ್ಚುತ್ತಿದ್ದು, ಇವುಗಳ ನಿರ್ವಹಣಾ ವೆಚ್ಚ ಅಂದರೆ ಸ್ವಚ್ಛತಾ ದ್ರಾವಣಗಳು, ವಿದ್ಯುಚ್ಛಕ್ತಿ ಮತ್ತು ನೀರಿನ ದರ ಮತ್ತು ಈ ಕೊಠಡಿಗಳನ್ನು ನಿರ್ವಹಿಸುವ ಸಿಬ್ಬಂದಿಯ ಸಂಖ್ಯೆ, ಇತ್ಯಾದಿಗಳು ಕಳೆದ ವರ್ಷಗಳಲ್ಲಿ ಅತಿ ದುಬಾರಿಯಾಗಿದೆ.

ಮೇಲೆ ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ಯಾವ ಯಾವ ಕ್ಷೇತ್ರಗಳಲ್ಲಿ ತೆರಿಗೆಯೇತರ ಆದಾಯಗಳನ್ನು ಸಂಗ್ರಹಿಸಬಹುದು ಹಾಗೂ ತೆರಿಗೆಯೇತರ ಆದಾಯಗಳನ್ನು ಸಂಗ್ರಹಿಸಬಹುದು ಹಾಗೂ ತೆರಿಗೆಯೇತರ ಆದಾಯಗಳನ್ನು ಹಣದುಬ್ಬರ ಸೂಚ್ಯಂಕ (Cost Inflation Index) ವೆಚ್ಚಗಳನ್ವಯ ಸೂಕ್ತ ಪರಿಷ್ಕರಣೆ ಮಾಡುವಂತೆಯೂ ಹಾಗೂ ಆ ಸಂಬಂಧ ಅರಣ್ಯ ಇಲಾಖೆಯು ಮಾಡಿರುವ ಅಭ್ಯಾಸಗಳನ್ನು ಉದಾಹರಣೆಗಾಗಿ ಕಳುಹಿಸಿ, ಸೂಕ್ತ ಪರಿಷ್ಕರಣೆ ಮಾಡಲು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ತೆರಿಗೆಯೇತರ ಆದಾಯ ದರಗಳನ್ನು ಹಣದುಬ್ಬರ ಸೂಚ್ಯಂಕ (Cost Inflation Index) ವೆಚ್ಚಗಳನ್ವಯ ಪರಿಶೀಲಿಸಿ, ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡದಲ್ಲಿನ ಬ್ಯಾಂಕ್ವೆಟ್ ಹಾಲ್, ಸಮ್ಮೇಳನ ಸಭಾಂಗಣ, ಸಮಿತಿ ಕೊಠಡಿಗಳ ಬಾಡಿಗೆ ದರವನ್ನು ಪರಿಷ್ಕರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 261 ಡಿಬಿಎಂ 2018, ಬೆಂಗಳೂರು ದಿನಾಂಕ:31-01-2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡದಲ್ಲಿರುವ ಬ್ಯಾಂಕ್ವೆಟ್ ಹಾಲ್, ಸಮ್ಮೇಳನ ಸಭಾಂಗಣ ಮತ್ತು ಸಮಿತಿ ಕೊಠಡಿಗಳ ತೆರಿಗೆಯೇತರ ಆದಾಯ ದರಗಳನ್ನು ಅನುಬಂಧದಲ್ಲಿರುವಂತೆ ಹಣದುಬ್ಬರ ಸೂಚ್ಯಂಕ (Cost Inflation Index)

ವೆಚ್ಚಗಳನ್ವಯ ತತ್‌ಕ್ಷಣದಿಂದಲೇ ಜಾರಿಗೆ ಬರುವಂತೆ ಪರಿಷ್ಕರಿಸಿ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಮಂಜೂರಾತಿ ನೀಡಲಾಗಿದೆ. ಈ ಶುಲ್ಕವನ್ನು ಕೆಳಕಂಡ ಇಲಾಖೆ ಮತ್ತು ಸಂಸ್ಥೆಗಳಿಗೆ ಮಾತ್ರ ವಿನಾಯಿತಿ ನೀಡಲಾಗಿದೆ.

ಅ) ರಾಜ್ಯ ಸರ್ಕಾರದ ಇಲಾಖೆಗಳಿಗೆ.

ಆ)ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಅಧಿಕಾರಿ/ನೌಕರರ ಸಂಘ ಸಂಸ್ಥೆಗಳಿಗೆ ಮಾತ್ರ ವಿನಾಯಿತಿ ನೀಡಲಾಗಿದೆ.

ಇ)ಕರ್ನಾಟಕ ಲೋಕ ಸೇವಾ ಆಯೋಗ ಕೇಂದ್ರ ಲೋಕಸೇವಾ ಆಯೋಗ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್ಸ್.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಸ್ಥಾಪಿಸಲ್ಪಟ್ಟ ನಿಗಮ/ಮಂಡಳಿ ಮತ್ತಿತರ ಸ್ವಾಯತ್ತ ಸಂಸ್ಥೆಗಳು ಸೇರಿ ಈ ಸಭಾಂಗಣವನ್ನು ಉಪಯೋಗಿಸಿಕೊಳ್ಳಬೇಕಾದಲ್ಲಿ ಅನುಬಂಧದಲ್ಲಿನ ಶುಲ್ಕ ಪಾವತಿಸತಕ್ಕದ್ದು.

1. ಯಾವುದೇ ಭಾರೀ ತೂಕದ ಉಪಕರಣಗಳನ್ನು ಈ ಸಭಾಂಗಣಗಳಿಗೆ ತರಬಾರದು.
2. ಬ್ಯಾಂಕ್ವೆಟ್ ಹಾಲ್‌ನ ಮಾರ್ಬಲ್ ನೆಲಕ್ಕೆ ಅಥವಾ ಸಮ್ಮೇಳನ ಸಭಾಂಗಣ;ಸಮಿತಿ ಕೊಠಡಿಗಳಲ್ಲಿನ ನೆಲಹಾಸಿಗೆ ದಕ್ಕೆ ಆಗುವಂತಹ ಪೀಠೋಪಕರಣ:ಉಪಕರಣ ಇತ್ಯಾದಿಗಳನ್ನು ಉಪಯೋಗಿಸಬಾರದು; ಸಾಮಾನ್ಯವಾಗಿ ಪ್ಲಾಸ್ಟಿಕ್ ಖುರ್ಚಿಗಳನ್ನಾಗಲಿ ಅಥವಾ ಖುರ್ಚಿಗಳಿಗೆ; ಮೇಜುಗಳಿಗೆ ಬುಷ್ ಇರುವಂತಹ ಪೀಠೋಪಕರಣಗಳನ್ನೇ ಉಪಯೋಗಿಸಬೇಕು.
3. ಮುಂಗಡವಾಗಿ ನಿಗದಿಪಡಿಸಿದ ಶುಲ್ಕ ಪಾವತಿ ಮಾಡಿದ ನಂತರ ಸಂಘ ಸಂಸ್ಥೆಗಳು ಮಂಡಳಿಗಳು ಮತ್ತು ಇತರೆಯವರು ಇವುಗಳನ್ನು ಕಾರಣಾಂತರಗಳಿಂದ ಮುಂದೂಡಲ್ಪಟ್ಟರೆ ಅಥವಾ ರದ್ದುಗೊಳಿಸಿದರೆ ಮುಂಗಡ ನೀಡಿರುವ ಶುಲ್ಕವನ್ನು ಹಿಂದಿರುಗಿಸುವುದಿಲ್ಲ. ಹಾಗೂ ಮುಂದೆ ಇದನ್ನು ಕಾದಿರಿಸಬೇಕಾದಲ್ಲಿ ನಿಗದಿಪಡಿಸಿದ ಮುಂಗಡ ಹಣವನ್ನು ಮತ್ತೊಮ್ಮೆ ಪಾವತಿ ಮಾಡಬೇಕು.
4. ಈ ಸಭಾಂಗಣಗಳ ಕಟ್ಟಡ ಅಥವಾ ಉಪಯೋಗಿಸುವ ಪೀಠೋಪಕರಣ, ನೆಲಹಾಸು ಇವಕ್ಕೆ ಯಾವುದೇ ಹಾನಿ ಆದಲ್ಲಿ ಇದಕ್ಕೆ ಪರಿಹಾರವನ್ನು ಸರ್ಕಾರ ಸೂಚಿಸಿದ ದರಗಳಲ್ಲಿ 15 ದಿನಗೊಳೊಳಗೆ ಸಂಬಂಧಪಟ್ಟ ಇಲಾಖೆಗಳು, ಸಂಘ ಸಂಸ್ಥೆಗಳು ಪಾವತಿ ಮಾಡತಕ್ಕದ್ದು,
5. ಈ ಸಭಾಂಗಣಗಳ ಕಾಯ್ದಿರಿಸುವಿಕೆಯನ್ನು ಯಾವುದೇ ಮುನ್ಸೂಚನೆ ನೀಡದೆ ರದ್ದುಪಡಿಸುವ ಹಕ್ಕು ಸರ್ಕಾರಕ್ಕಿರುತ್ತದೆ.

ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡದಲ್ಲಿರುವ ಬ್ಯಾಂಕ್ವೆಟ್ ಹಾಲ್, ಸಮ್ಮೇಳನ ಸಭಾಂಗಣ ಮತ್ತು ಸಮಿತಿ ಕೊಠಡಿಗಳನ್ನು ಯಾವುದೇ ಖಾಸಗಿ ಸಂಘ ಸಂಸ್ಥೆಗಳು ಏರ್ಪಡಿಸುವ ಸಭೆ; ಸಮಾರಂಭಗಳಿಗೆ ನೀಡಲಾಗುವುದಿಲ್ಲ.

ಯಾವುದೇ ಸಂಘ ಸಂಸ್ಥೆಗಳಿಗೆ ಈ ಸಭಾಂಗಣವನ್ನು ನೀಡುವ ಬಗ್ಗೆ ಅಥವಾ ಬಾಡಿಗೆ ವಿಧಿಸುವ ಬಗ್ಗೆ ಏನೇ ಅನುಮಾನ ಉಂಟಾದಲ್ಲಿ ಈ ಬಗ್ಗೆ ಮುಖ್ಯ ಕಾರ್ಯದರ್ಶಿಯವರು ನಿರ್ಣಯ ತೆಗೆದುಕೊಳ್ಳಲು ಅವರಿಗೆ ಅಧಿಕಾರ ನೀಡಲಾಗಿದೆ.